ಕರ್ನಾಟಕ ಸರ್ಕಾರ
ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ
ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಇಲಾಖೆ
2ನೇ ಮಹಡಿ, 3ನೇ ಹಂತ, ಬಹುಮಹಡಿ ಕಟ್ಟಡ, ಬೆಂಗಳೂರು-1.
ದೂ. 080-22372738 E-mail: nregs-ka@nic.in

ಗ್ರಾಅಪ 775 ಉಖಾಯೋ 2014 ದಿನಾಂಕ: 06-07-2016

**ಸುತ್ತೋಲೆ**

ವಿಷಯ: ಮಹಾತ್ಮಗಾಂಧಿ ನರೇಗಾ ಯೋಜನೆಯಡಿ ಸರ್ಕಾರದ ಗ್ರಾಮೀಣ ವಸತಿ ಯೋಜನೆಗಳನ್ನು ಒಗ್ಗೂಡಿಸುವಿಕೆಯ ಮೂಲಕ ಅನುಷ್ಠಾನ ಮಾಡುವ ಕುರಿತು.

ಉಲ್ಲೇಖ:
1. ನರೇಗಾ ಯೋಜನೆಯ ಗ್ರಾಮೀಣಾಭಿವೃದ್ಧಿ ಆಯುಕ್ತಾಲಯದ ಸುತ್ತೋಲೆ ಪತ್ರದ ಸಂಖ್ಯೆ: ಗ್ರಾಅಪ 775 ಉಖಾಯೋ 2014 ದಿನಾಂಕ: 11-08-2015
2. ಕೇಂದ್ರ ಸರ್ಕಾರದ ಗ್ರಾಮೀಣಾಭಿವೃದ್ಧಿ ಮಂತ್ರಾಲಯದ ಜಂಟಿ ಕಾರ್ಯದರ್ಶಿ (MGNREGA) ಇವರು ಹೊರಡಿಸಿರುವ ಪ್ರಧಾನ ಸುತ್ತೋಲೆಗಳ ಪತ್ರದ ಸಂಖ್ಯೆ: J-11011/01/2017-RE-I (355604) ದಿನಾಂಕ: 30-03-2017
3. ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 208 ಉಖಾಯೋ 2017 ಬೆಂಗಳೂರು ದಿನಾಂಕ: 26-04-2017.
4. ವ್ಯವಸ್ಥಾಪಕ ನಿರ್ದೇಶಕರು ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮ ನಿಯಮಿತ ಬೆಂಗಳೂರು ಇವರ ಪತ್ರದ ಸಂಖ್ಯೆ: RGRHCL 03 PGT 02 2017-18 ದಿನಾಂಕ: 27-05-2017

~~~~~~

ಮಹಾತ್ಮಗಾಂಧಿ ನರೇಗಾ ಯೋಜನೆಯಡಿ ಪ್ರಧಾನ ಮಂತ್ರಿ ಅವಾಸ್ ಯೋಜನೆ (ಗ್ರಾಮೀಣಾ)ಯಲ್ಲಿ ಮತ್ತು ರಾಜ್ಯದ ಇತರೆ ಯಾವುದೇ ವಸತಿ ಯೋಜನೆಗಳಡಿ ಮಂಜೂರಾದ ಮನೆಗಳ ನಿರ್ಮಾಣದ ಅಕುಶಲ ಘಟಕದ ಕೂಲಿ ವೆಚ್ಚವನ್ನು 90 ಮಾನವ ದಿನಗಳಿಗೆ ಭರಿಸಲು ಅವಕಾಶ ಕಲ್ಪಿಸಿದೆ. ಈ ಅಕುಶಲ ಕೂಲಿ ಘಟಕದ ವೆಚ್ಚವನ್ನು ಮನೆಯ ನಿರ್ಮಾಣದ ನಾಲ್ಕು ಹಂತಗಳಲ್ಲಿ ಪಾವತಿಸಲಾಗುವುದು ಮತ್ತು ಇದರಂತೆಯೇ, ಹಾಜರಾತಿ ಪಟ್ಟಿಗಳನ್ನು ನೀಡಿ ಮುಕ್ತಾಯಗೊಳಿಸಲು ಕ್ರಮವಹಿಸುವುದು. ನಾಲ್ಕು ಹಂತಗಳಲ್ಲಿ ಅಕುಶಲ ಕೂಲಿ ವೆಚ್ಚವನ್ನು ಭರಿಸುವ ವಿವರಗಳು ಈ ಮುಂದಿನಂತಿದೆ.

a. ತಳಪಾಯ ಮಟ್ಟದವರೆಗೆ - ಮೊದಲನೇ ಹಂತ
b. ತಳಪಾಯದಿಂದ ಲಿಂಟಲ್ ಮಟ್ಟದವರೆಗೆ - ಎರಡನೇ ಹಂತ
c. ಲಿಂಟಲ್ ಮಟ್ಟದಿಂದ ಮೇಲ್ಛಾವಣಿ ಮಟ್ಟದವರೆಗೆ - ಮೂರನೇ ಹಂತ
d. ಮೇಲ್ಛಾವಣೆ ಮಟ್ಟದಿಂದ ಪೂರ್ಣವಾಗುವ ಹಂತದವರೆಗೆ - ನಾಲ್ಕನೇ ಹಂತ

ಸದರಿ 90 ದಿನಗಳ ಅಕುಶಲ ಕೂಲಿ ವೆಚ್ಚವನ್ನು ಕ್ರಮವಾಗಿ 28, 24, 10 ಮತ್ತು 28 ಮಾನವ ದಿನಗಳಿಗೆ ಪಾವತಿಸಲಾಗುವುದು.
~~~~~~

2017-18ನೇ ಸಾಲಿನಲ್ಲಿ ಮಹಾತ್ಮಗಾಂಧಿ ನರೇಗಾ ಯೋಜನೆಯಡಿ ಕೇಂದ್ರ ಮತ್ತು ರಾಜ್ಯ ಸರ್ಕಾರದ ವಸತಿ ಯೋಜನೆಗಳ ಮನೆಗಳನ್ನು ಒಗ್ಗೂಡಿಸುವಿಕೆಯ ಮೂಲಕ ನಿರ್ಮಿಸಲು ಉಲ್ಲೇಖ(3)ರಲ್ಲಿ ರೂ. 500.00 ಕೋಟಿಗಳ ಅನುದಾನವನ್ನು ಮೀಸಲಿರಿಸಲಾಗಿದೆ. ವಸತಿ ಇಲಾಖೆಯಿಂದ ಈ ಕುರಿತು 5.00 ಲಕ್ಷಗಳ ಮನೆಗಳನ್ನು ನಿರ್ಮಾಣ ಮಾಡಲು ಹಮ್ಮಿಕೊಳ್ಳಲಾಗಿದೆ. ಜಿಲ್ಲಾವಾರು ವಿವರಗಳನ್ನು ಅನುಬಂಧದಲ್ಲಿ ಇದರೊಂದಿಗೆ ಲಗತ್ತಿಸಿದೆ.

ಮನೆಗಳ ನಿರ್ಮಾಣಕ್ಕೆ ಫಲಾನುಭವಿಗಳು ಮುಂದಾದಲ್ಲಿ ಕಾಮಗಾರಿಯ ಆದೇಶದ ಜೊತೆಗೆ e-NMR ಗಳನ್ನು ಫಲಾನುಭವಿಯ ಹೆಸರಿನಲ್ಲಿ ನೀಡುವುದು. ಮನೆಯ ನಿರ್ಮಾಣದ ಪ್ರಗತಿಯ ಹಂತಗಳನ್ನು ಮತ್ತು ಬೇಡಿಕೆಯನ್ನು ಆಧರಿಸಿ, e-NMR ಗಳನ್ನು ನೀಡುವುದು. ತದನಂತರ ಭರ್ತಿಯಾದ e-NMR ಗಳನ್ನು ಫಲಾನುಭವಿಯಿಂದ ಪಡೆದು ಮುಕ್ತಾಯಗೊಳಿಸಿದ ದಿನಾಂಕದಿಂದ ಒಂದು ವಾರದೊಳಗೆ ಪಾವತಿ ಮಾಡಲು ಅಗತ್ಯ ಕ್ರಮವಹಿಸುವುದು. ಒಂದುವೇಳೆ ಕಾಮಗಾರಿಯ ಆದೇಶದ ಜೊತೆಗೆ e-NMR ಗಳನ್ನು ಪಡೆದ ಫಲಾನುಭವಿಗಳು ಕಾಮಗಾರಿಯ ಯಾವುದೇ ಚಟುವಟಿಕೆಗಳನ್ನು ಕೈಗೊಳ್ಳದಿದ್ದಲ್ಲಿ ಅಂತಹ e-NMR ಗಳನ್ನು ಶೂನ್ಯಮಾಡಿ ಕಡ್ಡಾಯವಾಗಿ ಮುಕ್ತಾಯಗೊಳಿಸುವುದು.

ಇದರ ಜೊತೆಗೆ, ತಾಲ್ಲೂಕು ಪಂಚಾಯತಿಯ ಕಾರ್ಯನಿರ್ವಾಹಕ ಅಧಿಕಾರಿಗಳು/ಸಹಾಯಕ ನಿರ್ದೇಶಕರು (ಗ್ರಾಮೀಣ ಉದ್ಯೋಗ) ತಪ್ಪದೇ ಪ್ರತಿವಾರ ಇದರ ಪ್ರಗತಿಯನ್ನು ಪರಿಶೀಲನೆ ಮಾಡಿ ವರದಿಯನ್ನು ಮೇಲಾಧಿಕಾರಿಗಳಿಗೆ ಸಲ್ಲಿಸುವುದು ಮತ್ತು ಯಾವುದೇ ಕಾರಣಕ್ಕೂ ಪ್ರಗತಿಯಲ್ಲಿ ಕುಂಠಿತವಾಗದಂತೆ ಎಚ್ಚರವಹಿಸುವುದು.

ಉಳಿದಂತೆ ಈಗಾಗಲೇ ಉಲ್ಲೇಖ(1)ರಲ್ಲಿ ಹೊರಡಿಸಲಾದ ಸುತ್ತೋಲೆಯಲ್ಲಿ ತಿಳಿಸಲಾದ ಮಿಕ್ಕ ಎಲ್ಲಾ ನಿಯಮಗಳು, ನಿಬಂಧನೆಗಳು ಮತ್ತು ಷರತ್ತುಗಳಿಗೆ ಬದ್ಧರಾಗಿ ತಮ್ಮ ಜಿಲ್ಲೆಗೆ ನಿಗದಿಪಡಿಸಿದ ಗುರಿಯನ್ನು ಗರಿಷ್ಠ ಪ್ರಮಾಣದಲ್ಲಿ ಸಾಧಿಸಲು ಕ್ರಮವಹಿಸುವಂತೆ ಈ ಮೂಲಕ ನಿರ್ದೇಶಿಸಿದೆ.

ಆಯುಕ್ತರು, ಗ್ರಾಮೀಣಾಭಿವೃದ್ಧಿ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

ಗೆ

1. ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತಿಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ
2. ರಾಜ್ಯದ ಎಲ್ಲಾ ತಾಲ್ಲೂಕು ಪಂಚಾಯತಿಗಳ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ

**ಪ್ರತಿಯನ್ನು ಈ ಕೆಳಕಂಡವರ ಮಾಹಿತಿಗಾಗಿ ಸಲ್ಲಿಸಿದೆ:**

1. ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
2. ಸರ್ಕಾರದ ಮುಖ್ಯ ಕಾರ್ಯದರ್ಶಿ, ಕರ್ನಾಟಕ ಸರ್ಕಾರ ಇವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
3. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಹಾಗೂ ಅಭಿವೃದ್ಧಿ ಆಯುಕ್ತರು, ಕರ್ನಾಟಕ ಸರ್ಕಾರ ಇವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
4. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಇವರ ಆಪ್ತ ಕಾರ್ಯದರ್ಶಿಗಳು
5. ಸರ್ಕಾರದ ಎಲ್ಲಾ ಇಲಾಖೆಗಳ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ/ಪ್ರಧಾನ ಕಾರ್ಯದರ್ಶಿಗಳು/ ಕಾರ್ಯದರ್ಶಿಗಳು ಬೆಂಗಳೂರು

6. ವ್ಯವಸ್ಥಾಪಕ ನಿರ್ದೇಶಕರು, ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮ ನಿಯಮಿತ, ಇಂಡಸ್ಟ್ರಿಯಲ್ ಟೌನ್, ಬೆಂಗಳೂರು 560044
7. ಎಲ್ಲಾ ಅನುಷ್ಠಾನ ಸಂಸ್ಥೆಗಳ ಮುಖ್ಯಸ್ಥರುಗಳಿಗೆ:
   i. ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಅರಣ್ಯ ಪಡೆ ಮುಖ್ಯಸ್ಥರು), ಅರಣ್ಯ ಭವನ, ಮಲ್ಲೇಶ್ವರಂ, ಬೆಂಗಳೂರು.
   ii. ಆಯುಕ್ತರು, ಕೃಷಿ ಇಲಾಖೆ, ಶೇಷಾದ್ರಿ ರಸ್ತೆ, ಬೆಂಗಳೂರು.
   iii. ಆಯುಕ್ತರು, ಜಲಾನಯನ ಅಭಿವೃದ್ಧಿ ಇಲಾಖೆ, ಕಾವೇರಿ ಭವನ, ಬೆಂಗಳೂರು.
   iv. ರೇಷ್ಮೆ ಅಭಿವೃದ್ಧಿ ಆಯುಕ್ತರು, ರೇಷ್ಮೆ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.
   v. ನಿರ್ದೇಶಕರು, ತೋಟಗಾರಿಕೆ ಇಲಾಖೆ, ಲಾಲ್ ಬಾಗ್ ರಸ್ತೆ, ಬೆಂಗಳೂರು.
   vi. ನಿರ್ದೇಶಕರು, ಮೀನುಗಾರಿಕೆ ಇಲಾಖೆ, ವಿ.ವಿ.ಟವರ್, ಬೆಂಗಳೂರು.
   vii. ಮುಖ್ಯ ಅಭಿಯಂತರರು (ಸಣ್ಣ ನೀರಾವರಿ) ಉತ್ತರವಲಯ ಬಿಜಾಪುರ/ದಕ್ಷಿಣವಲಯ, ಕೆ.ಆರ್.ವೃತ್ತ, ಬೆಂಗಳೂರು.
   viii. ಮುಖ್ಯ ಅಭಿಯಂತರರು ಪಂಚಾಯತ್ ರಾಜ್ ಇಂಜನಿಯರಿಂಗ್ ಇಲಾಖೆ, ಬೆಂಗಳೂರು.
   ix. ಮುಖ್ಯ ಕಾರ್ಯಾಚರಣೆ ಅಧಿಕಾರಿ, ಕರ್ನಾಟಕ ಗ್ರಾಮೀಣ ರಸ್ತೆಗಳ ಅಭಿವೃದ್ಧಿ ಸಂಸ್ಥೆ, ಬೆಂಗಳೂರು.
   x. ಆಯುಕ್ತರು ಕರ್ನಾಟಕ ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ, ಗ್ರಾಮೀಣ ನೀರು ಸರಬರಾಜು ವಿಭಾಗ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಕಾವೇರಿ ಭವನ, ಬೆಂಗಳೂರು .
8. ಆಂತರಿಕ ಆರ್ಥಿಕ ಸಲಹೆಗಾರರು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬೆಂಗಳೂರು
9. ನಿರ್ದೇಶಕರು, ಅಬ್ದುಲ್ ನಜೀರ್ ಸಾಬ್, ಗ್ರಾಮೀಣಾಭಿವೃದ್ಧಿಯ ರಾಜ್ಯ ಸಂಸ್ಥೆ, ಲಲಿತಮಹಲ್ ರಸ್ತೆ, ಮೈಸೂರು
10. ಮುಖ್ಯ ಆರ್ಥಿಕ ಸಲಹೆಗಾರು/ಜಂಟಿ ನಿರ್ದೇಶಕರು, ತೋಟಗಾರಿಕೆ/ತಾಂತ್ರಿಕ/ಆಡಳಿತ, ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ, ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ
11. ರಾಜ್ಯದ ಎಲ್ಲಾ ಜಿಲ್ಲೆಗಳ ಒಂಬುಡ್ಸ್‌ಮನ್‌ಗಳಿಗೆ
12. ವಿಶೇಷಾಧಿಕಾರಿ, ಗಣಕಕೋಶ, ಗ್ರಾಅಪ ಇಲಾಖೆ. ಇವರು ಇಲಾಖಾ ವೆಬ್ ಸೈಟ್‌ನಲ್ಲಿ ಅಳವಡಿಸಲು ಕೋರಿದೆ.
13. ಸಂಪಾದಕರು ಕರ್ನಾಟಕ ವಿಕಾಸ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಇವರು ಇದನ್ನು ಸಂಚಿಕೆಯಲ್ಲಿ ಪ್ರಕಟಿಸಲು ಕೋರಿದೆ.
14. M/s Effia Technologies, ಅವರಿಗೆ www.end2endsolutions.comನಲ್ಲಿ ಪ್ರಕಟಿಸಲು/ಅಳವಡಿಸಲು ಕೋರಿದೆ.
15. ಹೆಚ್ಚಿನ ಪ್ರತಿಗಳು/ಮಹಾ ಕಡತಕ್ಕೆ.

ಅನುಬಂಧ - 1

| 2017-18 house completion target | | |
|---|---|---|
| SL. No | District | Annual House completion target-2017-18 |
| 1 | Tumakuru | 24488 |
| 2 | Chikkaballapur | 14254 |
| 3 | Chamarajanagar | 15716 |
| 4 | Bagalkot | 14620 |
| 5 | Chitradurga | 21564 |
| 6 | Gadag | 11818 |
| 7 | Ramanagara | 11940 |
| 8 | Davanagere | 20224 |
| 9 | Kodagu | 5361 |
| 10 | Hassan | 20590 |
| 11 | DakshinaKannada | 10112 |
| 12 | Haveri | 22173 |
| 13 | Bengaluru Urban | 7432 |
| 14 | Ballari | 21321 |
| 15 | Vijayapura | 15838 |
| 16 | Udupi | 5604 |
| 17 | Koppal | 15716 |
| 18 | Shivamogga | 14133 |
| 19 | Raichur | 28996 |
| 20 | Chikkamagaluru | 10356 |
| 21 | Mysuru | 30702 |
| 22 | Bidar | 16447 |
| 23 | Dharwad | 8650 |
| 24 | Belagavi | 42519 |
| 25 | Kolar | 18397 |
| 26 | Mandya | 12549 |
| 27 | Kalaburagi | 24732 |
| 28 | UttaraKannada | 9016 |
| 29 | Bengaluru Rural | 8650 |
| 30 | Yadgiri | 16082 |
| | **TOTAL** | **500000** |